ಲೆಗಿನ್ ಟಾಪ್ ಒಂದು ಅಮ್ಮನ ಕೈಗಿತ್ತು
ತೊಟ್ಟುಕೋ! ಅಂತ ಫರ್ಮಾನು ಹೊರಡಿಸಿದ್ದು
ನಿನ್ನೆಯ ಬೆಳವಣಿಗೆ.

ಯಾವ ಕಮೆಂಟುಗಳೇ ಇಲ್ಲದೆ
ನಾನೊಂದು ಜೀನ್ಸ್ ತೊಡುವಂತಾದರೆ...
ಮಹಿಳಾ ದಿನದಂದೇ ಅವಳು
ಅವಲತ್ತುಕೊಳ್ಳುವಳು.
ಇವರದ್ದು ಒಂದೇ ವರಾತ
ದುಪ್ಪಟ್ಟ ಇಲ್ಲದ ಬೋಳು ನಿಲುವಂಗಿ
ಹಾಕಿದರೆಷ್ಟು? ಬಿಟ್ಟರೆಷ್ಟು?

ಅರೆ! ಮಗಳ ಬಾಣಂತನಕ್ಕೆಂದು
ಹೋಗಿ ಬಂದ ಮೇಲೆ
ಎದುರು ಮನೆಯ ನೇಕೆಯಲ್ಲಿ
ಒಣಗಲು ಹರವಿದ ಆಂಟಿಯ
ಸೀರೆ ನೈಟಿಗಳು ಕಾಣುತ್ತಿಲ್ಲ!

ಸಾಗುವ ಹಾದಿಯಲ್ಲೊಂದು
ಅಚ್ಚರಿಯ ತಿರುವು ನಿನ್ನೆಯದೆ? ಮೊನ್ನೆಯದೆ?
ಈವರೆಗೆ ಸವೆಸಿದ ಹೆಜ್ಜೆಗಳು ಲೆಕ್ಕಕ್ಕೆ ಸಿಕ್ಕಿವೆಯಾ?

ಎದೆಯ ಕುದಿ ಉಕ್ಕಿ
ಕಣ್ಣ ಹನಿ ಬತ್ತಿ
ಈ ನಡುವೆ ಬಿಟ್ಟ ನಿಟ್ಟುಸಿರನ ಮೌನಕ್ಕೋ
ಬಂಗಾರದ ಹಣೆಪಟ್ಟಿ.

ಅಷ್ಟಕ್ಕೆ ಕಳೆದುಕೊಂಡದ್ದಕ್ಕೆಲ್ಲಾ
ಬೆಲೆ ಬಂದೀತೆ?
ಬಿಡಿ, ಬೆಲೆ ಕಟ್ಟಲಾಗದ ಕೆಲವೊಂದು
ಸಂಗತಿಗಳನ್ನು ಜಗಕೆ ಜಾಹೀರು ಮಾಡಿ
ಈಗ ಪ್ರಯೋಜನವಾದರೂ ಏನು?

● ಸ್ಮಿತಾ ಅಮೃತರಾಜ್

